ಅಧ್ಯಕ್ಷರು : ಪಾಟೀಲರೆ, ಉತ್ತರ ಹೇಳಿ.

ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :–

ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದಂಥ ವಿಚಾರ. ಈ ಭ್ರಷ್ಟಾಚಾರದ ವಿರುದ್ಧ ಸಂಘರ್ಷ ಮಾಡುವಂಥ ಕೆಲವು ಪ್ರಾಮಾಣಿಕ ಅಧಿಕಾರಿಗಳು ಬಹಳಷ್ಟು humiliation, harassmentಗೆ ಒಳಗಾಗಿರುವಂಥ ಪ್ರಸಂಗದಲ್ಲಿ ಇದು ಒಂದು. ಈಗಾಗಲೇ ಈ ಸುರೇಶ್ ಎನ್ನುವವರ ಆತ್ಮಹತ್ಯೆ, ಆ ಸನ್ನಿವೇಶ ಸೃಷ್ಟಿಯಾಗಲಿಕ್ಕೆ ಕಾರಣವಾಗಿರುವಂಥ ಅಧ್ಯಕ್ಷರನ್ನು, ಪಿ.ಡಿ.ಓ. ರವರನ್ನು ಈಗಾಗಲೇ arrestಮಾಡಿದ್ದಾರೆ. ಇದರ ಬಗ್ಗೆ ವಿವರವಾಗಿರುವಂಥ statement ಮಾಡುತ್ತೇವೆ.

ಅಧ್ಯಕ್ಷರು : OK. ಪ್ರಸನ್ನಕುಮಾರ್,

3) ವಿಷಯ : ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗೆ Administrative Officers ಭರ್ತಿ ಮಾಡುವ ಬಗ್ಗೆ.

ಶ್ರೀ ಕೆ.ಬಿ. ಪ್ರಸನ್ನಕುಮಾರ್ (ಶಿವಮೊಗ್ಗ) ಜಿಲ್ಲಾ ಆಸ್ಪತ್ರೆ ಮತ್ತು ಸರ್ಕಾರಿ ಮೆಡಿಕಲ್ ಕಾಲೇಜು ಇದೆ, ಇಲ್ಲಿ 17 administrative posts ಇವೆ. ಅದರಲ್ಲಿ 5 posts ನಲ್ಲಿ ಮಾತ್ರ ಕೆಲಸ ಮಾಡುತ್ತಿದ್ದಾರೆ, ಇನ್ನು 12 ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ counseling ನಾಳೆ ದಿವಸ ಪ್ರಾರಂಭವಾಗುತ್ತಿದೆ, ಆದರೆ ಖಾಲಿ ಇರುವ ಹುದ್ದೆಗಳ ವಿವರವನ್ನು net ನಲ್ಲಿ ತೋರಿಸುತ್ತಿಲ್ಲ. ಹತ್ತು ದಿವಸಗಳ ಹಿಂದೆ ಹುದ್ದೆಗಳು ಖಾಲಿ ಇವೆ ಎಂದು netನಲ್ಲಿ ತೋರಿಸುತ್ತಿತ್ತು. ಈಗ ತೋರಿಸುತ್ತಿಲ್ಲ.

ಅಧ್ಯಕ್ಷರು : ಅದಕ್ಕೆ ಏನು ಮಾಡಬೇಕೆಂದು ಹೇಳಿ.

ಶ್ರೀ ಕೆ.ಬಿ. ಪ್ರಸನ್ನಕುಮಾರ್ : ಸಂಬಂಧಪಟ್ಟವರನ್ನು ಕೇಳಿದರೆ, ಆರೋಗ್ಯ ಇಲಾಖೆಯವರು.,

ಅಧ್ಯಕ್ಷರು : ನೀವು ನೀವು ಚರ್ಚೆ ಮಾಡಿ, ಸರ್ಕಾರ ಏನು ಮಾಡಬೇಕು ಎಂದು ಹೇಳಿ.

ಶ್ರೀ ಕೆ.ಬಿ.ಪ್ರಸನ್ನಕುಮಾರ್ : ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಆ ಹುದ್ದೆಗಳನ್ನು ಮೆಡಿಕಲ್ ಕಾಲೇಜುನವರು ಭರ್ತಿ ಮಾಡಬೇಕೆಂದು ಆರೋಗ್ಯ

ಇಲಾಖೆಯವರು ಹೇಳುತ್ತಾರೆ. ಇವರಿಗೆ ಕೇಳಿದರೆ ಆ ಹುದ್ದೆಗಳನ್ನು ಆರೋಗ್ಯ ಇಲಾಖೆಯವರು ಮಾಡುತ್ತಾರೆಂದು ಹೇಳುತ್ತಾರೆ. ವ್ಯವಸ್ಥೆ ತುಂಬಾ ಹದಗೆಡುತ್ತಿದೆ. ಇರುವ 5 ಜನರಲ್ಲಿ ನವೆಂಬರ್ ತಿಂಗಳಿನಲ್ಲಿ ಇಬ್ಬರು retired ಆಗುತ್ತಿದ್ದಾರೆ.

ಅಧ್ಯಕ್ಷರು : ಆಯಿತು, ಉತ್ತರ ಹೇಳಿ.

ಶ್ರೀ ಯು.ಟಿ. ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಸಭಾಧ್ಯಕ್ಷರೆ, ನಮ್ಮ ಶಾಸಕರ ಮಿತ್ರರ ಬೇಡಿಕೆಯನ್ನು ನಾನು ನಮ್ಮ ವೈದ್ಯಕೀಯ ಶಿಕ್ಷಣ ಸಚಿವರೊಂದಿಗೆ ಕುಳಿತು ಚರ್ಚೆ ಮಾಡಿ ಬಗೆಹರಿಸುತ್ತೇನೆ.

ಅಧ್ಯಕ್ಷರು : ಆಯಿತು.

ಶ್ರೀ ಕೆ.ಬಿ. ಪ್ರಸನ್ನಕುಮಾರ್ : ಇನ್ನೊಂದು ವಿಚಾರವಿದೆ.

ಅಧ್ಯಕ್ಷರು : ನಾಳೆ ಕೇಳಿ,

ಶ್ರೀ ಕೆ.ಬಿ. ಪ್ರಸನ್ನಕುಮಾರ್ : ಸರ್, ಅದಕ್ಕೆ ಸಂಬಂಧಪಟ್ಟಂತೆ ಇರುವ ವಿಚಾರ ಇದು, ನಮ್ಮಲ್ಲಿ District Surgeon ಅನ್ನು change ಮಾಡಿದ್ದಾರೆ. ಶಿಕಾರಿಪುರದಲ್ಲಿರುವ ಜಿಲ್ಲಾ ಆಸ್ಪತ್ರೆಗೆ ಹಿಂದಿನ ಕಾಲದಲ್ಲಿ ವರ್ಗಾವಣೆ ಆಗಿತ್ತು. ಈಗ ಅಲ್ಲಿ ಯಾರು ಇಲ್ಲ. ಇವರು ಪತ್ರದಲ್ಲಿ ವರ್ಗಾವಣೆಯನ್ನು ವಾಪಸ್ಸು ಮಾಡಿದ್ದೇವೆಂದು ಹೇಳುತ್ತಾರೆ. ಅದನ್ನು ನೋಡಿಕೊಳ್ಳುವವರು ಯಾರು ಇಲ್ಲ. ಜಿಲ್ಲಾ ಸರ್ಜನ್ ಯಾರು ಇಲ್ಲ. ಮಾನ್ಯ ಮಂತ್ರಿಗಳು RMO ಗೆ ಅಧಿಕಾರ ಕೊಡುತ್ತೇವೆಂದು ಹೇಳುತ್ತಾರೆ. ಆದರೆ RMO ಗಳಿಗೆ ಅಧಿಕಾರ.,

ಅಧ್ಯಕ್ಷರು : ಆಯಿತು ಹೇಳಿ,

ಶ್ರೀ ಯು.ಟಿ. ಖಾದರ್ : ಜಿಲ್ಲಾ ಆಸ್ಪತ್ರೆಯನ್ನು ವೈದ್ಯಕೀಯ ಶಿಕ್ಷಣ ಮಂಡಳಿಗೆ ಹಸ್ತಾಂತರಿಸಿದ್ದೇವೆ.

ಅಧ್ಯಕ್ಷರು : ಈಗ ಅದು ನನಗೂ ಗೊತ್ತಿರುವ ವಿಚಾರ. ನಾನು ಹೇಳಿಬಿಡುತ್ತೇನೆ. ಕೇಳಿ. ಜಿಲ್ಲಾ ಆಸ್ಪತ್ರೆಯನ್ನು ಮೆಗಾನ್ ಆಸ್ಪತ್ರೆಗೆ ಶಿಫ್ಟ್ ಮಾಡಿದ್ದೇವೆ. ಅಲ್ಲಿ ಜಿಲ್ಲಾ ಸರ್ಜನ್ ಇದ್ದಾರೆ, ಅವರನ್ನು shift ಮಾಡಬೇಕೋ , ಬೇಡವೋ ?

ಶ್ರೀ ಯು.ಟಿ. ಖಾದರ್ : ಈಗ ಶಿವಮೊಗ್ಗದ ಮೆಗಾನ್ ಆಸ್ಪತ್ರೆಯನ್ನು ಶಿವಮೊಗ್ಗದ ಜಿಲ್ಲಾ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡಿದ್ದೇವೆ. ಈಗ ಶಿಕಾರಿಪುರದಲ್ಲಿರುವಂಥ DMO post ಅನ್ನು ರದ್ದುಪಡಿಸಿದ್ದೇವೆ.

ಅಧ್ಯಕ್ಷರು : ನೀವು ರದ್ದುಪಡಿಸಿರುವುದನ್ನು ಬೇರೆ ಕಡೆ ಹಾಕಿ ಎಂದು ಹೇಳುತ್ತಾರೆ. ಮಾನ್ಯ ಮುಖ್ಯಮುಖ್ಯಮಂತ್ರಿಗಳೇ ತಪ್ಪಾಗಿ ತಿಳಿದುಕೊಳ್ಳಬೇಡಿ, ಈಗ ಬೇರೆ ಟೈಮ್ ಇಲ್ಲ.

ಶ್ರೀ ಕೆ.ಬಿ. ಪ್ರಸನ್ನಕುಮಾರ್ : ಸರ್, ಉತ್ತರ ಕೊಡಿಸಿ, ತುಂಬಾ ತೊಂದರೆಯಾಗುತ್ತಿದೆ.

ಅಧ್ಯಕ್ಷರು : ಆಯಿತು, ಹೇಳಿದ್ದಾರೆ,

ಶ್ರೀ ಯು.ಟಿ.ಖಾದರ್ : ಜನಸಾಮಾನ್ಯರಿಗೆ ಯಾವುದೇ ತೊಂದರೆ ಇಲ್ಲ..

ಅಧ್ಯಕ್ಷರು : ಮಂತ್ರಿಗಳೇ ಏನಾಗಿದೆ ಎಂದರೆ ಜಿಲ್ಲಾ ಸರ್ಜನ್‌ರವರಿಗೆ ಕೆಲವು ಅಧಿಕಾರಗಳು ಇವೆ. ಸರ್ಟಿಫಿಕೇಟ್ ಕೊಡುವುದು. ವಗ್ಯೆರೆ, ವಗ್ಯೆರೆ, ಏನೇನೋ ಇರುತ್ತವೆ. ಈಗ ಜಿಲ್ಲಾ ಸರ್ಜನ್ ಇಲ್ಲದೇ ಹೋದರೆ ಆ ಜವಾಬ್ದಾರಿಯನ್ನು ಯಾರು ನಿರ್ವಹಿಸಬೇಕು ಎನ್ನುವುದು ಪ್ರಶ್ನೆ ಬರುತ್ತದೆ.

ಶ್ರೀ ಯು.ಟಿ. ಖಾದರ್ : ಒಂದು ಆಸ್ಪತ್ರೆಯಲ್ಲಿ ಒಂದು Medical Superintendent ಮತ್ತೊಂದು DMO ಎರಡೂ posts ಇರುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಸರ್ಟಿಫಿಕೇಟ್ ಇನ್ನಿತರೆ ಎಲ್ಲಾ ಸೌಲಭ್ಯಗಳನ್ನು ಕೊಡಲಿಕ್ಕೆ Resident Medical Officerಗೆ ಸಂಪೂರ್ಣವಾದ ಅಧಿಕಾರ ಇದೆ. ಅವರು ಆ ಕೆಲಸವನ್ನು ಮಾಡುತ್ತಿಲ್ಲ.

ಅಧ್ಯಕ್ಷರು : ಅದಕ್ಕೆ ಒಂದು Government Order ಹೊರಡಿಸಿಬಿಡಿ.

ಶ್ರೀ ಯು.ಟಿ.ಖಾದರ್ : G.O ಹೊರಸಿದ್ದೇವೆ.

ಅಧ್ಯಕ್ಷರು : ಆಯಿತು.

4) ವಿಷಯ : Forest Rights Act ಅದರಡಿ FRCಗಳ ಮುಂದೆ ರೈತರು ಅರ್ಜಿಗಳನ್ನು ಹಾಕಿಕೊಂಡಿರುವ ಬಗ್ಗೆ.

ಶ್ರೀ ಬಿ.ಬಿ. ನಿಂಗಯ್ಯ(ಮೂಡಿಗೆರೆ) : ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಕಳಸ...

ಅಧ್ಯಕ್ಷರು : ಈಗ ನಮ್ಮ ಕಾನೂನು ಸಚಿವರು ಎಲ್ಲರೂ ಸೇರಿ ಮಾತನಾಡಿದ್ದೇವೆ. ಅರಣ್ಯ ಸಚಿವರು ಕೊನೆಗೆ ಬಂದರು.